AN INTERNATIONAL ORGANIZATION DEDICATED TO PROTECTING THE RIGHTS OF ALL ANIMALS

**<u>For Immediate Release</u>:**
21 February 2017

**<u>Contact</u>:**
Nikunj Sharma +91 9910397382; NikunjS@petaindia.org
Shambhavi Tiwari +91 9167907382; ShambhaviT@petaindia.org

## ಬಹಿರಂಗಗೊಂಡಿದೆ :ಪ್ರಮುಖ ಭಾರತೀಯ ಪೌಲ್ಟ್ರೀ ಕಂಪೆನಿಗಳಿಂದ  ಕೋಳಿ ಮರಿಗಳನ್ನು ಸುಡಲಾಗುತ್ತದೆ, ನೀರಿನಲ್ಲಿ ಮುಳುಗಿಸಲಾಗುತ್ತಿದೆ, ಜಜ್ಜಲಾಗುತ್ತಿದೆ ಎಂದು ತನಿಖಾ ವಿಡಿಯೊ ಬಹಿರಂಗಗೊಳಿಸಿದೆ

**<u>ಮೊಟ್ಟೆ ಹಾಗೂ ಮಾಂಸ  ಉದ್ಯಮದಲ್ಲಿನ ಕ್ರೂರ ಪದ್ಧತಿಗಳನ್ನು ಬದಲಾಯಿಸಲು ಅಮೂಲಾಗ್ರ ಬದಲಾವಣೆಗಾಗಿ ಪೀಟಾ ಇಂಡಿಯಾ ಕರೆ ನೀಡುತ್ತಿದೆ- ಮತ್ತು ಸಸ್ಯಾಹಾರಿಯಾಗಲು ಜನರನ್ನು ಒತ್ತಾಯಿಸುತ್ತಿದೆ.</u>**

ಹೈದರಾಬಾದ್–ಪೀಪಲ್ ಫಾರ್ ದಿ ಎಥಿಕಲ್ ಟ್ರೀಟ್‌ಮೆಂಟ್ ಆಫ್ ಎನಿಮಲ್ಸ್ (ಪೀಟಾ) ಇಂಡಿಯಾದಿಂದ ಪಡೆದುಕೊಳ್ಳಲಾಗಿದ್ದು ಪಶು ಹಕ್ಕುಗಳ ಸಲುವಾಗಿ ಎನಾನಿಮಸ್‌ನಿಂದ ಆಂಧ್ರಪ್ರದೇಶ ಮತ್ತು ತೆಲಂಗಾಣಾದಲ್ಲಿ ಅನೇಕ ಹ್ಯಾಚೆರಿಗಳು ಮತ್ತು ಫಾರ್ಮ್‌ಗಳಲ್ಲಿನ ಪ್ರತ್ಯಕ್ಷದರ್ಶಿ ತನಿಖೆಯು–ಮೊಟ್ಟೆ ಉದ್ಯಮಕ್ಕೆ ನಿಷ್ಪ್ರಯೋಜಕವೆಂದು ಪರಿಗಣಿಸಲಾದ ಹಾಗೂ ಇತರ ನಿರುಪಯೋಗದ ಕೋಳಿ ಮರಿಗಳೆಂದು ಸಾಮಾನ್ಯವಾಗಿ ವರ್ಗೀಕರಿಸಲಾದ ಲಕ್ಷಾಂತರ ಗಂಡು ಕೋಳಿ ಮರಿಗಳನ್ನು ಭಾರತೀಯ ಮೊಟ್ಟೆ ಹಾಗೂ ಮಾಂಸ ಉದ್ಯಮದ ಪ್ರಮುಖ ಸಂಸ್ಥೆಗಳಿಂದ ಅವುಗಳು ಜೀವಂತವಾಗಿರುವಾಗಲೇ ನೀರಿನಲ್ಲಿ ಮುಳುಗಿಸಲಾಗುತ್ತದೆ, ಸುಡಲಾಗುತ್ತದೆ, ಜಜ್ಜಲಾಗುತ್ತದೆ, ಕಸದ ಬುಟ್ಟಿಗಳಿಗೆ ಎಸೆಯಲಾಗುತ್ತದೆ ಮತ್ತು ಇತರ ಪಶುಗಳಿಗೆ ತಿನ್ನಿಸಲಾಗುತ್ತದೆ ಎಂಬುದನ್ನು ಬಹಿರಂಗಪಡಿಸಿದೆ.

**ತನಿಖೆ ವಿಡಿಯೊಗಳ ನಿರೂಪಿಸಲಾದ ಮತ್ತು ನಿರೂಪಿಸಲಾಗಿರದ ಆವೃತ್ತಿಗಳನ್ನು ಮತ್ತು ವಿವರವಾದ ವರದಿಯನ್ನು <u>ಇಲ್ಲಿ</u> ವೀಕ್ಷಿಸಿರಿ ಮತ್ತು ಡೌನ್‌ಲೋಡ್ ಮಾಡಿರಿ. ವಿಡಿಯೊ  ಫೂಟೇಜ್‌ನ ನಿರೂಪಿಸಲಾದ ಆವೃತ್ತಿಯನ್ನು <u>ಇಲ್ಲಿಂದ</u>ಲೂ ಕೂಡ ವೀಕ್ಷಿಸಬಹುದು ಮತ್ತು ಭಿನ್ನವಾದ ನಿರೂಪಿಸಲಾಗಿರದ ಆವೃತ್ತಿಯನ್ನು <u>ಇಲ್ಲಿ</u> ವೀಕ್ಷಿಸಬಹುದು.**

ಪ್ರತ್ಯಕ್ಷದರ್ಶಿಯಿಂದ ಈ ಕೆಳಗಿನವುಗಳನ್ನು ದಾಖಲಿಸಿಕೊಳ್ಳಲಾಗಿದೆ:

- ಇನ್‌ಕ್ಯೂಬೇಟರ್‌ಗಳಲ್ಲಿ ಹ್ಯಾಚ್ ಮಾಡುವುದು ಕೋಳಿ ಮರಿಗಳಲ್ಲಿ  ಅಂಗಾಂಗಗಳು  ಹೊರ ಚಾಚುವುದು ಮುಂತಾದ ವಿರೂಪತೆಗಳಿಗೆ ಕಾರಣವಾಗುತ್ತದೆ.
- ಅವುಗಳ  ಲಿಂಗವನ್ನು ನಿರ್ಧರಿಸಲು ಕೆಲಸಗಾರರು ಕೋಳಿ ಮರಿಗಳ ಸಂವೇದನಾಶೀಲ ಜನನಾಂಗಗಳ ಮೇಲೆ ಜೋರಾಗಿ ಒತ್ತುತ್ತಾರೆ.
- ಮೊಟ್ಟೆ ಉದ್ಯಮದಲ್ಲಿ ಸಾಮಾನ್ಯವಾಗಿ ಕಾಣಲಾಗುವ ಕೋಳಿಗಳನ್ನು ಒತ್ತೊತ್ತಾಗಿ ಕೂಡಿ ಹಾಕುವ  ಕಾರಣದಿಂದಾದ ಮಾನಸಿಕ ಒತ್ತಡದ ಕಾರಣ ಕೋಳಿ ಮರಿಗಳು ಒಂದು ಮತ್ತೊಂದನ್ನು ಕುಟುಕುವುದನ್ನು  ತಡೆಗಟ್ಟಲು ಕೋಳಿ ಮರಿಗಳ ಕೊಕ್ಕಿನ ದೊಡ್ಡ ಭಾಗವನ್ನು ಅರಿವಳಿಕೆ ನೀಡದೆನೇ  ಕಾಯ್ದ ಬ್ಲೇಡ್‌ನಿಂದ ಕೊಯ್ಯಲಾಗುತ್ತದೆ.
- ಬೇಡವಾದ ಕೋಳಿ ಮರಿಗಳನ್ನು ಅವು ಇನ್ನೂ ಜೀವಂತವಾಗಿರುವಾಗಲೇ ಮೊಟ್ಟೆಯ  ಚಿಪ್ಪು ಮತ್ತು ಸತ್ತ ಮರಿಗಳೊಂದಿಗೆ ದೊಡ್ಡ ಗ್ರೈಂಡರ್‌ಗೆ ಎಸೆಯಲಾಗುತ್ತದೆ.
- ಅವುಗಳನ್ನು ನೀರು ತುಂಬಿದ ಪಾತ್ರೆಗಳಲ್ಲಿ 30 ನಿಮಿಷಗಳ ತನಕ ಮುಳುಗಿಸಲಾಗಿ ಅವು ತಪ್ಪಿಸಿಕೊಳ್ಳಲು ವಿಫಲ ಪ್ರಯತ್ನ ಮಾಡುತ್ತವೆ.
- ಕೆಲವನ್ನು ಬೆಂಕಿಗೆ ಎಸೆಯಲಾಗುತ್ತದೆ ಮತ್ತು ಸುಟ್ಟು ಸಾಯಿಸಲಾಗುತ್ತದೆ.
- ಇತರವುಗಳನ್ನು ಜಜ್ಜಲಾಗುತ್ತದೆ ಅಥವಾ ಅಧಿಕ ಸಂಖ್ಯೆಯಲ್ಲಿ ಡ್ರಮ್‌ಗಳಲ್ಲಿ ಅಥವಾ ಟ್ರಕ್‌ಗಳಲ್ಲಿ  ಎಸೆದು  ಉಸಿರು ಕಟ್ಟಿ ಸಾಯಿಸಲಾಗುತ್ತದೆ.
- ಕೆಲಸಗಾರರು ಕೋಳಿ ಮರಿಗಳನ್ನು ಮೀನಿನ ಫಾರ್ಮ್‌ಗಳಿಗೆ ಕೂಡ ಸಾಗಿಸುತ್ತಾರೆ. ಅವನ್ನು ಜೀವಂತವಾಗಿ ತಿನ್ನಲಾಗುವಂತೆ ಮಾಡಲು ಕೆರೆಗಳಿಗೆ ಎಸೆಯಲಾಗುತ್ತದೆ ಮತ್ತು ಅವು ತಪ್ಪಿಸಿಕೊಳ್ಳಲು ಪ್ರಯತ್ನಿಸಿದರೆ ಪುನಃ ಅವನ್ನು ನೀರಿಗೆ ತಳ್ಳಲಾಗುತ್ತದೆ.

PEOPLE FOR THE ETHICAL TREATMENT OF ANIMALS

PETA India
PO Box 28260
Juhu, Mumbai
400 049
(22) 4072 7382
(22) 2636 7383 (fa

Info@petaindia.or
PETAIndia.com

**NEWS RELEASE**

Affiliates:
- PETA US
- PETA Foundation (UK)
- PETA Asia
- PETA Germany
- PETA Netherlands

Registered Office:
H-341, Ground Floor
New Rajendra
Nagar, New Delhi
110 066

ಈ ದೌರ್ಜನ್ಯಕ್ಕೆ ಪ್ರತಿಸ್ಪಂದನವಾಗಿ, ಜನರು ಸಸ್ಯಾಹಾರಿಗಳಾಗಬೇಕು ಎಂದು ಮತ್ತು ಲಿಂಗ ನಿರ್ಧಾರದ ಸಲುವಾಗಿ ಹೊಸ ಇನ್ ಓವೊ ತಂತ್ರಜ್ಞಾನವನ್ನು ಪರಿಗಣಿಸಬೇಕೆಂದು ಸರಕಾರಕ್ಕೆ ಪೀಟಾ ಕರೆ ನೀಡುತ್ತಿದ್ದು ಇದರಲ್ಲಿ ಕೋಳಿಗಳು ಅವು ಮರಿ ಮಾಡುವ ಮೊದಲೇ ಅವುಗಳ ಲಿಂಗವನ್ನು ನಿರ್ಧರಿಸಲಾಗುತ್ತದೆ. ಇದರಿಂದಾಗಿ ಸಂಭಾವ್ಯ ದೊಡ್ಡ - ಪ್ರಮಾಣದಲ್ಲಿ ಹುಂಜಗಳ ಮೃತ್ಯುವನ್ನು ತಡೆಗಟ್ಟಲಾಗುತ್ತದೆ, ಅನಾರೋಗ್ಯಕರ ಕೋಳಿಗಳಿಗಾಗಿ ನೋವು ರಹಿತ ಇಯುಥನೇಸಿಯಾವನ್ನು ದೃಢೀಕರಿಸಲಾಗುತ್ತಿದೆ ಮತ್ತು ಲಿಖಿತ ಸ್ಟ್ಯಾಂಡರ್ಡ್‌ನ್ನು ಜಾರಿಗೊಳಿಸಲಾಗುತ್ತದೆ ಮತ್ತು ಕ್ರೂರ ರೀತಿಗಳಲ್ಲಿ ಕೋಳಿಗಳನ್ನು ಕೊಲ್ಲುವ ಕಂಪೆನಿಗಳ ವಿರುದ್ಧ ಕಠಿಣ ಕ್ರಮ ಜರಗಿಸಲಾಗುತ್ತದೆ.

‘‘ ಕೈ ಕಾಲು ಮುರಿದ ಹುಂಜಗಳನ್ನು ಸಣ್ಣ ಸಣ್ಣ ಗೂಡುಗಳಲ್ಲಿ ಕೂಡಿ ಹಾಕುವುದರಿಂದ ಕಡೆಯುವುದು, ನೀರಿನಲ್ಲಿ ಮುಳುಗಿಸುವುದು ಮತ್ತು ಕೋಳಿ ಮರಿಗಳನ್ನು ಸುಡುವುದು ಮುಂತಾದುವುಗಳಿಂದ ಮೊಟ್ಟೆ ಹಾಗೂ ಮಾಂಸ ಉದ್ಯಮಗಳಲ್ಲಿ ಕ್ರೂರತೆಯು ತಾಂಡವವಾಡುತ್ತಿದೆ’’ ಎನ್ನುತ್ತಾರೆ ಪೀಟಾ ಇಂಡಿಯಾದ ಸಿಇಓ ಪೂರ್ವ ಜೋಶಿಪುರಾ. ‘‘ಸಸ್ಯಾಹಾರಿಗಳಾಗುವುದೇ ನಮ್ಮ ಊಟಗಳ ಸಲುವಾಗಿ ಯಾವುದೇ ಪಶು ಪೀಡನೆಗೆ ಒಳಗಾಗುವುದಿಲ್ಲ ಎಂದು ಖಾತ್ರಿ ಮಾಡಿಕೊಳ್ಳುವ ಏಕಮಾತ್ರ ವಿಧಾನ ಎಂಬುದು ಪೀಟಾದ ಸಂದೇಶವಾಗಿದೆ.’’

ವಿಡಿಯೋದಲ್ಲಿ ಪ್ರತ್ಯಕ್ಷದರ್ಶಿಯಿಂದ ಡೈಮಂಡ್ ಗ್ರೂಪ್; ಪೌಲ್ಟ್ರಿ ಉದ್ಯಮದಲ್ಲಿ ಮನೆ ಮಾತಾಗಿದ್ದು ಭಾರತದಲ್ಲಿ ಮಾಂಸದ ಸಲುವಾಗಿ ಮಂಚೂಣಿಯ ಉತ್ಪಾದಕರು ಮತ್ತು ಅದರ ವೆಬ್‌ಸೈಟ್‌ನ ಪ್ರಕಾರ ಅದು ಕಾರ್ಯನಿರ್ವಹಿಸುತ್ತಿರುವ ಪೌಲ್ಟ್ರೀ ವಿಭಾಗದಲ್ಲಿ ಲೇಯರ್ ಮಾರುಕಟ್ಟೆಯ 95% ಪಾಲನ್ನು ಹೊಂದಿರುವ ಎಸ್‌ಎಚ್ ಸಮೂಹದ ಅಗ್ರಗಣ್ಯ ಕಂಪೆನಿಯಾದ ಶ್ರೀನಿವಾಸ ಹ್ಯಾಚರೀಸ್ ಲಿ; ಮತ್ತು ಮಾಂಸ ಉದ್ಯಮಕ್ಕಾಗಿ ಪ್ರತಿ ತಿಂಗಳಿಗೆ 60,00,000 ಕೋಳಿಗಳನ್ನು ಉತ್ಪಾದಿಸುತ್ತಿದ್ದು ಸಾಕಣೆಯ ಫಾರ್ಮ್‌ನಲ್ಲಿ 5,00,000 ಕೋಳಿಗಳಿಗೆ ಅವಕಾಶವಿರುವ ಎಸ್‌ಆರ್ ಸಮೂಹ ಮುಂತಾದ ಕಂಪೆನಿಗಳಿಂದ ಕೋಳಿಗಳನ್ನು ಕೊಲ್ಲುವ ವಿಭಿನ್ನ ವಿಧಾನಗಳನ್ನು ದಾಖಲಿಸಿಕೊಳ್ಳಲಾಗಿದೆ. ವಿಡಿಯೋ ವ್ಯಾಂಕೀಸ್ ಎಂದು ಸಾಮಾನ್ಯವಾಗಿ ಇಲ್ಲಿ ಉಲ್ಲೇಖಿಸಲಾಗುವ ವೆಂಕಟೇಶ್ವರ ಹ್ಯಾಚರೀಸ್ ಪ್ರೈವೇಟ್ ಲಿಮಿಟೆಡ್‌ನಲ್ಲಿನ ಸ್ಯಾಕ್ಸಿಂಗ್ ಪದ್ಧತಿಗಳನ್ನು ಹಾಗೂ ಭಾರತದ ಅತಿ ದೊಡ್ಡ ಪೌಲ್ಟ್ರಿ ಉತ್ಪಾದಕರಲ್ಲಿ ಒಬ್ಬರಾದ ಸ್ಕೈಲಾರ್ಕ್ ಸಮೂಹದ ಸ್ಕೈಲಾರ್ಕ್ ಹ್ಯಾಚರೀಸ್ ಪ್ರೈವೇಟ್ ಲಿಮಿಟೆಡ್ ಇವರಿಂದ ಸಾಗಿಸಲ್ಪಡುವಾಗ ಕೋಳಿ ಮರಿಗಳು ಜಜ್ಜಲ್ಪಡುವುದನ್ನು ಕೂಡಾ ತೋರಿಸುತ್ತದೆ.

ಹೆಚ್ಚಿನ ಮಾಹಿತಿಗಾಗಿ, ದಯವಿಟ್ಟು PETAIndia.com. ಇಲ್ಲಿಗೆ ಭೇಟಿ ನೀಡಿರಿ.

#

PEOPLE FOR THE ETHICAL TREATMENT OF ANIMALS

PETA India
PO Box 28260
Juhu, Mumbai
400 049
(22) 4072 7382
(22) 2636 7383 (fa

Info@petaindia.org
PETAIndia.com

NEWS RELEASE

Affiliates:
- PETA US
- PETA Foundation (UK)
- PETA Asia
- PETA Germany
- PETA Netherlands

Registered Office:
H-341, Ground Floor
New Rajendra
Nagar, New Delhi
110 066